ಅಧ್ಯಕ್ಷರು : ಮುಂದಿನ ಪ್ರಶ್ನೆ ಕಷ್ಣಪ್ಪನವರದ್ದು ಇದೆ. ಕೃಷ್ಣಪ್ಪನವರೇ, ಅದಕ್ಕೆ ಉತ್ತರ ಬಂದಿಲ್ಲದಿರುವುದರಿಂದ ನಿಮ್ಮ ಪ್ರಶ್ನೆಯನ್ನು ಮುಂದಿನ ವಾರ ತೆಗೆದುಕೊಳ್ಳುತ್ತೇನೆ.

ಶ್ರೀ ವಿ. ಕೃಷ್ಣಪ್ಪ : ನಮ್ಮದು ಬರೋದೇ ಒಂದು ಪ್ರಶ್ನೆ. ಮಂತ್ರಿಗಳು ಇನ್ನು ಅದರ ಬಗ್ಗೆ ಸ್ಪಡಿ ಮಾಡಿಲ್ಲವೆ?

ಅಧ್ಯಕ್ಷರು : ಕೃಷ್ಣಪ್ಪನವರೇ, ನಾವು ಇನ್ನೂ 25 ದಿನ ಸದನವನ್ನು ನಡೆಸುತ್ತೇವೆ. ಮುಂದಿನ ವಾರ ನಿಮ್ಮ ಪ್ರಶ್ನೆಯನ್ನು ಖಂಡಿತ ತೆಗೆದುಕೊಳ್ಳುತ್ತೇವೆ. ಈಗ ಮುಂದಿನ ಪ್ರಶ್ನೆ ಮಾನ್ಯ ಗೋಪಾಲ್ ಪೂಜಾರಿಯವರದ್ದು.

ಕುಂದಾಪುರ ತಾಲ್ಲೂಕು ವಂಡ್ಸೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಹಿಳಾ ವೈದ್ಯಾಧಿಕಾರಿ ಹುದ್ದೆ ಭರ್ತಿ ಮಾಡುವ ಬಗ್ಗೆ

22 (64) ಶ್ರೀ ಗೋಪಾಲ ಪೂಜಾರಿ (ಬೈಂದೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕು ವಂಡ್ಸೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಹಿಳಾ ವೈದ್ಯಾಧಿಕಾರಿಗಳು ಇಲ್ಲದೆ ಗರ್ಭಿಣಿಯರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಹುದ್ದೆಯನ್ನು ಯಾವಾಗ ತುಂಬಲಾಗುವುದ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು

ಆ) ಒಂದು ಮಹಿಳಾ ವೈದ್ಯಾಧಿಕಾರಿ ಹುದ್ದೆ ಸೃಜಿಸುವ ಪ್ರಸ್ತಾವನೆಯನ್ನು ಅಧಿಕಾರಯುಕ್ತ ಸಮಿತಿ ಮುಂದೆ ದಿನಾಂಕ 19-6-2002 ರಂದು ಇಡಲಾಗಿತ್ತು. ಅಧಿಕಾರಯುಕ್ತ ಸಮಿತಿಯು ಪ್ರಸ್ತಾವನೆಯನ್ನು ಅನುಮೋದಿಸಿದೆ. ಇದಕ್ಕೆ ಅನುಗುಣವಾಗಿ ಸರ್ಕಾರ ಆದೇಶ ಹೊರಡಿಸಿದ ನಂತರ ಹುದ್ದೆಯನ್ನು ತುಂಬಲಾಗುವುದು.

ಶ್ರೀ ಕೆ. ಗೋಪಾಲ್ ಪೂಜಾರಿ : ಮಾನ್ಯ ಅಧ್ಯಕ್ಷರೆ, ಮಹಿಳಾ ವೈದ್ಯಾಧಿಕಾರಿ ಹುದ್ದೆಯ ನೇಮಕಕ್ಕೆ ಸಂಬಂಧಪಟ್ಟಂತೆ ಆದೇಶವನ್ನು ಸರ್ಕಾರ ಎಂದು ಹೊರಡಿಸುತ್ತದೆ?

ಶ್ರೀ ಕಾಗೋಡು ತಿಮ್ಮಪ್ಪ : ಅಧ್ಯಕ್ಷರೆ, ಎಂಪೌವರ್ ಕಮಿಟಿಯವರು ಕ್ಲಿಯರ್ ಮಾಡಿದ್ದಾರೆ. ಸರ್ಕಾರ ಸಾಧ್ಯವಾದಷ್ಟು ಬೇಗ ಆರ್ಡ್ರ್ ಹೊರಡಿಸುತ್ತದೆ.

ಶ್ರೀ ಕೆ. ಗೋಪಾಲ್ ಪೂಜಾರಿ : ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಆರೋಗ್ಯ ಘಟಕದಲ್ಲಿ ವೈದ್ಯಾಧಿಕಾರಿಗಳ ಹುದ್ದೆ ಬಹಳಷ್ಟು ಖಾಲಿ ಇದೆ, ಎ.ಎನ್.ಎಮ್. ಪೋಸ್ಟ್, ಗ್ರೂಪ್ ಡಿ ನೌಕರರ ಹುದ್ದೆ ಖಾಲಿ ಇದೆ, ಇವುಗಳನ್ನು ಯಾವಾಗ ಭರ್ತಿ ಮಾಡುತ್ತೀರಿ?

ಶ್ರೀ ಕಾಗೋಡು ತಿಮ್ಮಪ್ಪ : ಈಗ ಇರತಕ್ಕಂಥದ್ದು ಆರೋಗ್ಯ ಘಟಕ. ಈ ಸಾರಿ ಎಲ್ಲಾ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡತಕ್ಕಂಥ ಕೆಲಸವನ್ನು ಮಾಡಲಾಗುವುದು.

ಶ್ರೀ ಎನ್. ಚಿಲುವರಾಯಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾಗಮಂಗಲ ತಾಲ್ಲೂಕಿನ ಬನ್ನೇನಹಳ್ಳಿ ಹೋಬಳಿ ಕೇಂದ್ರದಲ್ಲಿ ಒಂದು ಹೆರಿಗೆ ಆಸ್ಪತ್ರೆ ಕೆಲಸ ಕಂಪ್ಲೀಟ್ ಆಗಿ ಎರಡು ವರ್ಷಗಳಾಗಿವೆ. ಹುದ್ದೆ ಮಂಜೂರಾಗಿ ಒಂದು ವರ್ಷವಾಗಿದೆ. ಸ್ಟಾಫ್ ಮತ್ತು ವೈದ್ಯರನ್ನು ಭರ್ತಿ ಮಾಡದೇ ಇರುವುದರಿಂದ ಸ್ಥಳೀಯ ಜನರಿಗೆ ಬಹಳಷ್ಟು ತೊಂದರೆಯಾಗುತ್ತಿದೆ. ಬನ್ನೇನಹಳ್ಳಿ ಹೋಬಳಿ ಕೇಂದ್ರ ಅದು. ದಯಮಾಡಿ ಸಚಿವರು ಅದಕ್ಕೆ ಉತ್ತರ ಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ತಾವು ಹೇಳಿರುವುದಕ್ಕೆ ಸಂಬಂಧಪಟ್ಟಂತೆ ಖಂಡಿತ ಗಮನಹರಿಸುತ್ತೇನೆ.

ಶ್ರೀ ಎ. ಪಾಪಣ್ಣ : ಈಗಾಗಲೇ ಈ ವಿಷಯವನ್ನು ಹೇಳಿದ್ದೆ. ಎಲ್.ಹೆಚ್.ನಲ್ಲಿ ಒಬ್ಬರು ಗರ್ಭಿಣಿ ವೈದ್ಯರು ಇದ್ದಾರೆ. ಇವರನ್ನು ಬೇರೆ ಕಡೆ ಹಾಕಿ, ಇಲ್ಲಿ ಅವರ ಅಗತ್ಯವಿಲ್ಲವೆಂದು ಹೇಳಿ ಆರು ತಿಂಗಳಾಯಿತು. ಅವರನ್ನು ಸುಮ್ಮನೇ ಕೂರಿಸಿದ್ದಾರೆ, ದಯಮಾಡಿ ಅವರನ್ನು ಈಗಲಾದರೂ ಬೇರೆ ಕಡೆಗೆ ಹಾಕಿ.

ಅಧ್ಯಕ್ಷರು : ಪರಿಶೀಲಿಸುತ್ತೇವೆ ಎಂದು ಹೇಳಿ ಬಿಡಿ. ಆ ಪ್ರಶ್ನೆಗೆ ಉತ್ತರ ಬೇಡ. ಈಗ ಮುಂದಿನ ಪ್ರಶ್ನೆ ಚೌಡರೆಡ್ಡಿಯವರದ್ದು.

ಬಾಗೇಪಲ್ಲಿ ತಾಲ್ಲೂಕಿನ ಚೇಳೂರು ಹೋಬಳಿಯಲ್ಲಿ ಕುಡಿಯುವ ನೀರಿನ ಸೌಲಭ್ಯ ಒದಗಿಸುವುದು

23 (117) ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಂತಾಮಣಿ ಕ್ಷೇತ್ರಕ್ಕೆ ಸೇರಿದ ಬಾಗೇಪಲ್ಲಿ ತಾಲ್ಲೂಕಿನ ಚೇಳೂರು ಹೋಬಳಿಯಲ್ಲಿ ಕುಡಿಯುವ ನೀರಿಗೆ ಅಭಾವವಿದ್ದು ಮತ್ತು ಸಿಗುವ ನೀರಿನಲ್ಲಿ ಫ್ಲೋರೈಡ್ ಮಿಶ್ರಿತ ಲವಣಗಳಿಂದ ಕೂಡಿದ ನೀರನ್ನು ಕುಡಿದು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಮತ್ತು ಎಷ್ಟು ದಿನಗಳಲ್ಲಿ ಪರಿಹಾರ ನೀಡುತ್ತದೆ ಎಂಬುದನ್ನು ತಿಳಿಸಲಾಗುವುದೆ;

ಇ) 2001-02 ನೇ ಸಾಲಿನಲ್ಲಿ ಕುಡಿಯುವ ನೀರಿನ ಅಭಾವವನ್ನು ನೀಗಿಸಲು ಚೇಳೂರು ಹೋಬಳಿಯಲ್ಲಿ ಎಷ್ಟು ಕೊಳವೆ ಬಾವಿಗಳನ್ನು ಕೊರೆಯಲಾಗಿದೆ ಮತ್ತು ಯಾವ ಯಾವ ಗ್ರಾಮಗಳಲ್ಲಿ ಎಷ್ಟು ಕೊಳವೆ ಬಾವಿಗಳನ್ನು ಕೊರೆಯಲಾಗಿದೆ ಎಂಬುದರ ವಿವರಗಳನ್ನು ನೀಡುವುದು?

ಶ್ರೀ ಕೆ.ಬಿ. ಕೋಳಿವಾಡ್ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು)

ಅ) ಬಾಗೇಪಲ್ಲಿ ತಾಲ್ಲೂಕಿನ ಚೇಳೂರು ಹೋಬಳಿಯಲ್ಲಿ ಸದ್ಯಕ್ಕೆ ಕುಡಿಯುವ ನೀರಿನ ಅಭಾವವಿರುವುದಿಲ್ಲ. ಸದರಿ ಹೋಬಳಿಯ ಕೆಲವು ಗ್ರಾಮಗಳಲ್ಲಿಯ ಕೊಳವೆಬಾವಿಗಳ ನೀರಿನಲ್ಲಿ